EE (RRN)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2018–19ನೇ ಸಾಲಿನ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆಯಡಿ ಬಿಬಿಎಂಪಿಗೆ ಒದಗಿಸಿರುವ ರೂ.8015.37 ಕೋಟಿ ಅನುದಾನದಡಿ ರಾಜರಾಜೇಶ್ವರಿನಗರ ವಲಯದ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅನುಮೋದಿತ "Comprehensive development of roads, drains and footpath in HMT Layout, SBM Colony and Surrounding areas in Ward No.17 under PACKAGE- 2019-20 RRN-DIV-(10)" ಪ್ಯಾಕೇಜು ಕಾಮಗಾರಿಗಳ ರೂ.11.00 ಕೋಟಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್‌ಗೆ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20–09–2019.
2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಬಿಬಿಎಂಪಿ/ಆಯುಕ್ತರು/ಪಿಆರ್/594/2020–21, ದಿನಾಂಕ: 20–05–2020.
3. ದಿನಾಂಕ: 10–06–2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿ.

ಬಿ.ಬಿ.ಎಂ.ಪಿ. ಆಯುಕ್ತರ ಆಪ್ತ ಕಾರ್ಯಾಲಯ
ಸಂಖ್ಯೆ ಪಿ.ಎಸ್.ಜಿ.ಆರ್.(1)...376...
ದಿನಾಂಕ..31/12/2020.....

* * * * *

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 20–09–2019ರ ಆದೇಶದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20–09–2019ರಲ್ಲಿ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದ್ದು, ಸದರಿ ಆದೇಶದ ಅನುಬಂಧ–2 ರ ಕ್ರ.ಸಂ 1943 ರಲ್ಲಿನ ಕಾಮಗಾರಿಗೆ ರೂ.1100.00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 20–05–2020ರ ಪತ್ರದಲ್ಲಿ, ಬಿಬಿಎಂಪಿ ಆಯುಕ್ತರು, ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20–09–2019ರಲ್ಲಿ ತಿಳಿಸಿದಂತೆ, ನಗರೋತ್ಥಾನ ಅಡಿಯಲ್ಲಿ ಪಾಲಿಕೆಗೆ ನೀಡಿದ ರೂ.8015.37 ಕೋಟಿಗಳ ಅನುದಾನದಲ್ಲಿ ಅನುಬಂಧ–2ರಲ್ಲಿ ರಾಜರಾಜೇಶ್ವರಿನಗರ ವಲಯದ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರಕ್ಕೆ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕಾರ್ಯಪಾಲಕ ಅಭಿಯಂತರರು (ರಾಜರಾಜೇಶ್ವರಿನಗರ ವಿಭಾಗ) ರವರು ಕೆ.ಟಿ.ಪಿ.ಪಿ ನಿಯಮಾವಳಿ (Standard Tender Documents) ಪ್ರಕಾರ e-procurement ನಡಿಯಲ್ಲಿ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಅನುಮೋದನೆ ನೀಡುವ ಪ್ರಾಧಿಕಾರವು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಅಧಿಕಾರಯುಕ್ತ ಸಮಿತಿಗೆ ಇರುತ್ತದೆ.

ಆದುದರಿಂದ, ಸರ್ಕಾರವು ಅನುಮೋದಿಸಿರುವ ಕ್ರಿಯಾ ಯೋಜನೆಯಂತೆ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಆಡಳಿತಾತ್ಮಕ ಅನುಮೋದನೆ ಹಾಗೂ ಟೆಂಡರ್ ಅನುಮೋದನೆ ಬಗ್ಗೆ ಪ್ರಸ್ತಾವನೆಯನ್ನು ಅಧಿಕಾರಯುಕ್ತ ಸಮಿತಿ ಮುಂದೆ ದಿನಾಂಕ: 20–05–2020 ರಂದು ಮಂಡಿಸಿ, ಸಭೆಯ ನಡವಳಿಯಂತೆ

EE (RRN)
ಮುಖ್ಯ ಅಭಿಯಂತರರು, ರಾ.ರಾ.ನ.ಯೋ
ಪತ್ರ ಸಂಖ್ಯೆ: 5242/20-21
ದಿನಾಂಕ: 10/03/21

. . .2/- . .

Scanned with CamScanner

ಗುತ್ತಿಗೆದಾರರು ತೀಳಿಸುವ ಟೆಂಡರ್ ಮೊತ್ತಕ್ಕೆ ಅನುಮೋದನೆ ಕೋರಿರುತ್ತಾರೆ. ಈ ಬಗ್ಗೆ ತೀರ್ಮಾನಿಸುವ ಸಕ್ಷಮ ಪ್ರಾಧಿಕಾರವು ಸರ್ಕಾರದ ಮಟ್ಟದ ಟೆಂಡರ್ ಅಂಗೀಕಾರ ಸಮಿತಿಯಾಗಿದ್ದು, ಅನುಬಂಧದಲ್ಲಿ ಪ್ರತ್ಯೇಕ ಕಾಮಗಾರಿಗಳ ಮುಂದೆ ಸೂಚಿಸಿದ ಟೆಂಡರ್ ಮೊತ್ತ ಮತ್ತು ಆಡಳಿತಾತ್ಮಕ ಅನುಮೋದನೆಯ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳುವಂತೆ ಬಿಬಿಎಂಪಿ ಆಯುಕ್ತರು ರಾಜರಾಜೇಶ್ವರಿನಗರ ವಲಯ, ರಾಜರಾಜೇಶ್ವರಿನಗರ ವಿಧಾನಸಭಾ ಕಾಮಗಾರಿಗಳಿಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

"Comprehensive development of roads, drains and footpath in HMT Layout, SBM Colony and Surrounding areas in Ward No.17 under PACKAGE- 2019-20 RRN-DIV-(10)" ಕಾಮಗಾರಿಗೆ ರೂ.1100.00 ಲಕ್ಷಗಳ ಅಂದಾಜು ಮೊತ್ತಕ್ಕೆ ಟೆಂಡರ್ ಪ್ರಕಟಣೆ ಸಂಖ್ಯೆ: RRND/EE/Tend/13/2019-20, Date: 21-01-2020 ರಂದು ಟೆಂಡರ್ ಕರೆಯಲಾಗಿದ್ದು, ಟೆಂಡರ್‌ಗಿಟ್ಟ ಮೊತ್ತ ರೂ.9,52,64,464.66 ಗಳಾಗಿದ್ದು, ದಿನಾಂಕ: 23-01-2020 ರಂದು ವಿಜಯ ಕರ್ನಾಟಕ ಮತ್ತು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿದ್ದು, ದಿನಾಂಕ: 24-02-2020 ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕವಾಗಿರುತ್ತದೆ ಎಂದು ಬಿಬಿಎಂಪಿ ಆಯುಕ್ತರು ತಿಳಿಸಿರುತ್ತಾರೆ.

ಸದರಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ಪೈ 2018, ದಿನಾಂಕ: 20-09-2019, ಅನುಮೋದಿತ ಕ್ರಿಯಾಯೋಜನೆ ಅನುಬಂಧ-2 ರ ಕ್ರ.ಸಂ 1943 ರಲ್ಲಿ ಒಟ್ಟು ರೂ.1100.00 ಲಕ್ಷಗಳಿಗೆ ಅನುದಾನ ಒದಗಿಸಿದ್ದು, ದ್ವಿ-ಲಕೋಟೆ ತಾಂತ್ರಿಕ ಟೆಂಡರ್‌ನಲ್ಲಿ ಗುತ್ತಿಗೆದಾರರು ಸಲ್ಲಿಸಿರುವ ದಾಖಲೆಗಳನ್ವಯ ದಿನಾಂಕ: 04-04-2020 ರ ತಾಂತ್ರಿಕ ಮೌಲ್ಯಮಾಪನ/ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂಧಾನ ಸಮಿತಿಯ ತೀರ್ಮಾನದಂತೆ ಆರ್ಥಿಕ ಬಿಡ್‌ನ್ನು ದಿನಾಂಕ: 17-04-2020 ರಂದು ತೆರೆಯಲಾಗಿದ್ದು ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ ಸಂ	ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಟೆಂಡರ್‌ಗಿಟ್ಟ ಮೊತ್ತ (2018-19ನೇ ಸಾಲಿನ ಲೋ.ಇ. ದರಪಟ್ಟಿ ದರಗಳಂತೆ (ರೂ. ಗಳಲ್ಲಿ)	ಗುತ್ತಿಗೆದಾರರು ನಮೂದಿಸಿರುವ ಮೊತ್ತ. (ರೂ.ಗಳಲ್ಲಿ)	2018-19ನೇ ಸಾಲಿನ ಮಂಜೂರಾದ ದರಗಳಿಗೆ ಹೋಲಿಸಿದಾಗ ಶೇಕಡವಾರು	ದರ ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.ಗಳಲ್ಲಿ (2018-19 ನೇ ಸಾಲಿನ ದರಪಟ್ಟಿಯಂತೆ) ಹಾಗೂ 2018-19ನೇ ಸಾಲಿನ ದಿ:04.01.2020ರ ಆದೇಶದ ಪರಿಷ್ಕೃತ ದರಗಳಿಗೆ ಹೋಲಿಸಿದಾಗ
1	ಶ್ರೀ.ರಾಜು ಸಿ ಟಿ	9,52,64,464.66	10,28,90,416.90	+8.01%	ರೂ.10,00,17,957/- ಶೇ.+4.99% ರಷ್ಟು ಹೆಚ್ಚು ದರಗಳು ಹಾಗೂ ಶೇ. +6.69% ರಷ್ಟು ಹೆಚ್ಚು ದರಗಳು. ಎಲ್1
2	ಶ್ರೀ.ಆರ್ ಲೋಕೇಶ್		10,56,19,035.67	+10.87%	ಎಲ್2

ಎಲ್-1 ಬಿಡ್‌ದಾರರಾದ ಶ್ರೀ.ರಾಜು ಸಿ ಟಿ ರವರು ನಮೂದಿಸಿರುವ ಮೊತ್ತ ರೂ.10,28,90,416.90 (ಜಿ.ಎಸ್.ಟಿ ಹೊರತುಪಡಿಸಿ) ಗಳನ್ನು ಮಂಜೂರಾದ ದರಗಳಿಗೆ ಹೋಲಿಸಿದಾಗ ಶೇ.8.01% ರಷ್ಟು ಹೆಚ್ಚುವರಿ

. . .3/-

Scanned with CamScanner

ದರಗಳಾಗಿದ್ದು, ಗುತ್ತಿಗೆದಾರರು ನಮೂದಿಸಿರುವ ದರಗಳು ಹೆಚ್ಚಾಗಿರುವುದನ್ನು ಕಾರ್ಯಪಾಲಕ ಅಭಿಯಂತರರು (ರಾಜರಾಜೇಶ್ವರಿನಗರ ವಿಭಾಗ) ರವರು ಗಮನಿಸಿ, ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಿ, ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸಿರುವ ಶೇ.8.01% ರಷ್ಟು ಹೆಚ್ಚುವರಿ ದರಗಳಿಂದ ಶೇ.4.99% ರಷ್ಟು ಹೆಚ್ಚುವರಿ ದರಗಳಿಗೆ ಕಡಿಮೆ ಮಾಡಿರುತ್ತಾರೆ. ಈ ಬಗ್ಗೆ ತೀರ್ಮಾನ ಕೈಗೊಳ್ಳಲು ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ತಾಂತ್ರಿಕ/ಆರ್ಥಿಕ ಮೌಲ್ಯ ಮಾಪನ ಮತ್ತು ದರಸಂಧಾನ ಸಮಿತಿಯ ಮುಂದೆ ಮಂಡಿಸಲಾಗಿದೆ.

ಎಲ್-1 ಬಿಡ್‌ದಾರರಾದ ಶ್ರೀ.ರಾಜು ಸಿ ಟಿ ರವರು ನಮೂದಿಸಿರುವ ಮೊತ್ತ ರೂ.10,28,90,416.90 (ಜಿ.ಎಸ್.ಟಿ ಹೊರತುಪಡಿಸಿ) ಗಳನ್ನು ಮಂಜೂರಾದ ಟೆಂಡರ್‌ಗಿಟ್ಟ ದರಗಳಿಗೆ ದರ ಸಂಧಾನದ ನಂತರ ಶೇ.4.99% ರಷ್ಟು ಹೆಚ್ಚುವರಿ ದರಗಳಿಗೆ ಕಡಿಮೆ ಮಾಡಿ ತೀರ್ಮಾನಿಸಲಾಗಿದ್ದು, ಸದರಿ ತೀರ್ಮಾನದಂತೆ ಸಂಧಾನಿತ ಟೆಂಡರ್ ಮೊತ್ತವಾದ ರೂ.10,00,17,957/- (ಜಿ.ಎಸ್.ಟಿ ಹೊರತುಪಡಿಸಿ) ಗಳನ್ನು ದರಪಟ್ಟಿ 2018-19ನೇ ಸಾಲಿನ ದರಗಳಿಗೆ ಹೋಲಿಸಿದಾಗ ಶೇ.4.99% ರಷ್ಟು ಹೆಚ್ಚುವರಿ ದರಗಳು ಕಂಡು ಬಂದಿದ್ದು, ಸಮಿತಿಯ ಬಗ್ಗೆ ತೀರ್ಮಾನ ಕೈಗೊಳ್ಳಲು ಸರ್ಕಾರದ ಮಟ್ಟದಲ್ಲಿ ರಚಿತವಾಗಿರುವ ಅಧಿಕಾರಯುಕ್ತ ಸಮಿತಿಯ ಮುಂದೆ ಪ್ರಸ್ತಾವನೆಯ ಟಿಪ್ಪಣಿಯನ್ನು ಮಂಡಿಸುವುದು ಸೂಕ್ತವೆಂದು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ ಎಂದು ಆಯುಕ್ತರು ಬಿಬಿಎಂಪಿ ರವರು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ: 10-06-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ಮುಂದೆ ಬಿ.ಬಿ.ಎಂ.ಪಿ. ಆಯುಕ್ತರ ದಿನಾಂಕ: 20-05-2020ರ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ, ವಿಷಯವನ್ನು ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

"ವಿವರವಾದ ಚರ್ಚೆಯ ನಂತರ "Comprhensive Development of roads, drains and footpath in HMT Layout, SBM Colony and Surrounding areas in Ward No.17 under PACKAGE- 2019-20 RRN-DIV-(10)" ಪ್ಯಾಕೇಜಿನ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, CT Raju ರವರ ಸಂಧಾನಿತ ಬಿಡ್ಡನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.9,52,64,464.66/- ಗಳಿಗೆ ಹೋಲಿಸಿದಾಗ 1.00% ಅಧಿಕ ಅಂದರೆ ರೂ.9,62,17,109/- ಗಳಿಗೆ ಮಿತಿಗೊಳಿಸಿ (ಅನ್ವಯವಾಗುವ ಎಲ್ಲ ತೆರಿಗೆಗಳು ಸೇರಿದಂತೆ) ಅನುಮೋದಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು."

ದಿನಾಂಕ: 10-06-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ನಅಇ 139 ಎಂಎನ್‌ವೈ 2020 (3),
ಬೆಂಗಳೂರು, ದಿನಾಂಕ: 29-08-2020.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20-09-2019 ರಲ್ಲಿ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾ ಯೋಜನೆಯ ಅನುಬಂಧ-2 ರ ಕ್ರ.ಸಂ 1943 ರಲ್ಲಿನ "Comprhensive Development of roads, drains and footpath in HMT Layout, SBM

. . .4/-

Scanned with CamScanner

Colony and Surrounding areas in Ward No.17 under PACKAGE- 2019-20 RRN-DIV-(10)" ಪ್ಯಾಕೇಜಿನ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ದಿನಾಂಕ: 10-06-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ, CT Raju ರವರ ಸಂಧಾನಿತ ಬಿಡ್ದನ್ನು, ಟೆಂಡರ್ಗಿಟ್ಟ ಮೊತ್ತವಾದ ರೂ.9,52,64,464.66/- ಗಳಿಗೆ ಹೋಲಿಸಿದಾಗ 1.00% ಅಧಿಕ ಅಂದರೆ ರೂ.9,62,17,109/- ಗಳಿಗೆ (ಒಂಭತ್ತು ಕೋಟಿ ಐವತ್ತೆರಡು ಲಕ್ಷದ ಅರವತ್ತ ನಾಲ್ಕು ಸಾವಿರದ ನಾಲ್ಕುನೂರ ಅರವತ್ತ ನಾಲ್ಕು ರೂಪಾಯಿಗಳು ಮತ್ತು ಅರವತ್ತಾರು ಪೈಸೆಗಳು ಮಾತ್ರ) (ಅನ್ವಯವಾಗುವ ಇತರ ಎಲ್ಲ ತೆರಿಗೆಗಳು ಸೇರಿದಂತೆ) ಮಿತಿಗೊಳಿಸಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಟೆಂಡರ್ಗೆ ಅನುಮೋದನೆಯನ್ನು ನೀಡಿದೆ.

ಷರತ್ತುಗಳು:

1. ಕಾಮಗಾರಿಗಳಿಗೆ ಬಿಡ್ದಾರರು ಒಪ್ಪದ ಪಕ್ಷದಲ್ಲಿ ಮರು ಟೆಂಡರ್ ಕರೆಯುವುದು.
2. ಮೇಲಿನ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ / ನಿಯಮಗಳು ಹಾಗೂ ಎಲ್ಲಾ ಚಾಲ್ತಿ ನಿಯಮಗಳನ್ನು ಪಾಲಿಸಿಕೊಂಡು ಅನುಷ್ಠಾನಗೊಳಿಸುವುದು.
3. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್ಪೈ 2018, ದಿನಾಂಕ: 20-09-2019ರ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಯೋಜನೆಯ ಅನುದಾನದಲ್ಲಿ ಮೀಸಲಿಟ್ಟಿರುವ ಅನುದಾನದಲ್ಲಿ ಭರಿಸುವುದು.
4. ಮೇಲಿನ ಕಾಮಗಾರಿಯನ್ನು ಸರ್ಕಾರದಿಂದ ಮಂಜೂರಾದ ಮೊತ್ತದ ಮಿತಿಯಲ್ಲಿಯೇ ಯಾವುದೇ ಹೆಚ್ಚುವರಿಯಾಗದಂತೆ ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು ಹಾಗೂ ಹೆಚ್ಚುವರಿ ಟೆಂಡರ್ ಪ್ರೀಮಿಯಂ ಅನ್ನು ಬಿಬಿಎಂಪಿಯ ಸ್ವಂತ ಸಂಪನ್ಮೂಲದಿಂದ ಭರಿಸತಕ್ಕದ್ದು.
5. ಕರ್ನಾಟಕ ಆರ್ಥಿಕ ಸಂಹಿತೆ 1958 ಸಾಧಿಲ್ವಾರು ವೆಚ್ಚ ಕೈಪಿಡಿ ಅಧಿನಿಯಮ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಕಾಯ್ದೆ ನಿಯಮಗಳುಸಾರ ಕ್ರಮವಹಿಸತಕ್ಕದ್ದು.
6. ಸರ್ಕಾರವು ಕಾಮಗಾರಿಗಳಿಗೆ ಆಡಳಿತಾತ್ಮಕ ಮತ್ತು ಟೆಂಡರ್ಗಳಿಗೆ ಅನುಮೋದನೆ ನೀಡಿದ್ದಾಗ್ಯೂ ಸಹ ಕಾಮಗಾರಿಯು ಪುನರಾವರ್ತನೆ ಆಗದಂತೆ ನೋಡಿಕೊಳ್ಳತಕ್ಕದ್ದು. ಅನುಮೋದನೆಗೊಂಡಿರುವ ಕಾಮಗಾರಿಯನ್ನಲ್ಲದೆ ಯಾವುದೇ ಕಾರಣಕ್ಕೆ ಬೇರೆ ಕಾಮಗಾರಿಗಳನ್ನು ಕೈಗೊಳ್ಳಬಾರದು.
7. ಮೇಲಿನ ಕಾಮಗಾರಿಗೆ 3rd Party Quality Monitors ಗಳನ್ನು ನೇಮಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.
8. ದಿನಾಂಕ: 10-06-2020ರ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಯಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಹಾಗೂ ನಿಬಂಧನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಕ್ಷ್ಮೀ ಸಾಗರ್ ಎನ್.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.

. . .5/-

Scanned with CamScanner

3. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3 ಮತ್ತು 9), ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿಗಳು-3 ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
11. ಕಾರ್ಯಪಾಲಕ ಅಭಿಯಂತರರು (ತಾಂತ್ರಿಕ ಕೋಶ), ನಗರಾಭಿವೃದ್ಧಿ ಇಲಾಖೆ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

Scanned with CamScanner